ಮಾಗಡಿ ಕ್ಷೇತ್ರಕ್ಕೆ ಪಶುಸಂಗೋಪನಾ ಇಲಾಖೆಯಿಂದ ಖರ್ಚು ಮಾಡಿರುವ ಹಣ

2238 -ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1994 ಡಿಸೆಂಬರ್‌ನಿಂದ ಈವರೆಗೆ ಮಾಗಡಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿವಿಧ ಯೋಜನೆಗಳಡಿಯಲ್ಲಿ ವಿವಿಧ ಕಾರ್ಯಕ್ರಮಗಳಿಗಾಗಿ ಪಶುಸಂಗೋಪನಾ ಇಲಾಖೆಯಿಂದ ಖರ್ಚು ಮಾಡಿದ ಒಟ್ಟು ಮೊಬಲಗೆಷ್ಟು?*

ಆ) *ಹಾಲಿ ಚಾಲ್ತಿಯಲ್ಲಿರುವ ಹಾಗೂ ಬಾಕಿ ಇರುವ ಕಾಮಗಾರಿಗಳು ಕಾರ್ಯಕ್ರಮಗಳು ಇವುಗಳಿಗೆ ತಗಲುವ ಒಟ್ಟು ವೆಚ್ಚವೆಷ್ಟು? ಇವುಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?*

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) 11.80 ಲಕ್ಷ ರೂ.ಗಳು.

ಆ) ಚಾಲ್ತಿಯಲ್ಲಿರುವ ಮತ್ತು ಬಾಕಿ ಇರುವ ಕಾಮಗಾರಿ ಕಾರ್ಯಕ್ರಮಗಳು.

ಅಂದಾಜು ವೆಚ್ಚ

1.	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ ಹುಲಿಕಟ್ಟೆ ಕಟ್ಟಡ	4.00 ಲಕ್ಷ
2.	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ ಮಣ್ಣೆಗಾನಹಳ್ಳಿ ಕಟ್ಟಡ	3.00 ಲಕ್ಷ
3.	- ಅದೇ - ಉಳ್ಳೇನಹಳ್ಳಿ ಕಟ್ಟಡ	3.00 ಲಕ್ಷ
4.	- ಅದೇ - ಹೊಸಪಾಳ್ಯ ಕಟ್ಟಡ	0.50 ಲಕ್ಷ
	ಒಟ್ಟು	**10.50 ಲಕ್ಷ**

ಈ ವರ್ಷ ಅಂತ್ಯಕ್ಕೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ನಾಗರ ಹೊಳೆ ರಾಷ್ಟ್ರೀಯ ಉದ್ಯಾನ

2239 - ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನಾಗರಹೊಳೆ ರಾಷ್ಟ್ರೀಯ ಉದ್ಯಾನದಲ್ಲಿ ತಾಜ್ ಹೋಟೆಲ್ ಸಮೂಹಕ್ಕೆ ನೀಡಿರುವ ಅರಣ್ಯ ಪ್ರದೇಶ ಎಷ್ಟು?*

ಅ) *ಈ ಅರಣ್ಯ ಪ್ರದೇಶವನ್ನು ವಾಪಸ್ಸು ಪಡೆಯಲು ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಸೂಚಿಸಿದೆಯೇ, ಹಾಗಿದ್ದಲ್ಲಿ ಯಾವಾಗ ಸೂಚಿಸಿದೆ ಮತ್ತು ಎಷ್ಟು ದಿನದೊಳಗೆ ವಾಪಸ್ಸು ಪಡೆಯಲು ಸೂಚಿಸಿದೆ?*

ಆ) *ಈ ಅರಣ್ಯ ಪ್ರದೇಶವನ್ನು ರಾಜ್ಯ ಸರ್ಕಾರ ವಾಪಸ್ಸು ಪಡೆದಿದೆಯೇ, ಯಾವಾಗ ವಾಪಸ್ಸು ಪಡೆದಿದೆ?*

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) :

ಅ) ನಾಗರಹೊಳೆ ರಾಷ್ಟ್ರೀಯ ಉದ್ಯಾನದಲ್ಲಿ ತಾಜ್ ಹೋಟೆಲ್ ಸಮೂಹಕ್ಕೆ ಮುರ್ಕಲ್ ನಲ್ಲಿರುವ 0.67 ಹೆಕ್ಟೇರ್ ಪ್ರದೇಶದಲ್ಲಿರುವ ಇಲಾಖಾ ಕಟ್ಟಡ ಸಮುಚ್ಚಯವನ್ನು ಮಾತ್ರ ಪ್ರವಾಸೋದ್ಯಮ ನಡೆಸಲಿಕ್ಕೆ 18 ವರ್ಷಗಳ ಅವಧಿಗೆ ಗೇಣಿ ಆಧಾರದ ಮೇಲೆ ನೀಡಲಾಗಿರುತ್ತದೆ.

ಆ) ಕೇಂದ್ರ ಸರ್ಕಾರ ತಮ್ಮ ದಿನಾಂಕ 17.9.98ರಲ್ಲಿ ಮೇಲ್ಕಂಡ ಕಟ್ಟಡ ಸಮುಚ್ಚಯವನ್ನು ಮೆ. ತಾಜ್ ಗ್ರೂಪ್‌ನವರಿಗೆ ಗೇಣಿ ಆಧಾರದ ಮೇಲೆ ಕೊಡುವ ಬಗ್ಗೆ ಅರಣ್ಯ ಸಂರಕ್ಷಣಾ ಕಾಯ್ದೆ 1980 ರಂತೆ ಅನುಮೋದನೆ ಕೋರಿರುವ ಪ್ರಸ್ತಾವನೆಯನ್ನು ತಿರಸ್ಕರಿಸಿ ತಕ್ಷಣ ವಾಪಸ್ ಪಡೆಯಲು ಸೂಚಿಸಿರುತ್ತಾರೆ.

ಇ) ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿ ಅರಣ್ಯ ಭೂಮಿ ಒತ್ತುವರಿ

2244 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಅರಣ್ಯ ಭೂಮಿ ಒತ್ತುವರಿ ಮಾಡಿರುವ ಬಗ್ಗೆ ಅಧ್ಯಯನ ಮಾಡಿ ಎಲ್ಲಾ ಸಾಧಕ ಬಾಧಕಗಳ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಲು ಅಧಿಕಾರಿಗಳ ಸಮಿತಿಯನ್ನೇನಾದರೂ ಸರ್ಕಾರ ರಚಿಸಿದೆಯೇ?*

ಆ) *ಹಾಗಿದ್ದಲ್ಲಿ ಆ ಸಮಿತಿ ತನ್ನ ವರದಿಯನ್ನು ನೀಡಿದೆಯೇ?*

ಇ) *ನೀಡಿದ್ದಲ್ಲಿ, ಅದರ ಸಾರಾಂಶವೇನು?*

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.